ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 101/2017

ಪಿ. ಡಬ್ಲ್ಯುಃ 01
ಸಿ. ಡಬ್ಲ್ಯುಃ 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರವಿ |
| ತಂದೆ/ಪತಿಯ ಹೆಸರು | ಃ | ಪುಟ್ಟರಾಮು |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ಕೂಲಿ ಕೆಲಸ |
| ವಾಸ | ಃ | ಹೊಂಗಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 12.09.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.2 ನನ್ನ ಅಣ್ಣ, ಚಾಸಾ.3 ಮತ್ತು 4 ಗೊತ್ತು. ಆರೋಪಿತರು ಗೊತ್ತು. ದಿಃ 26.04.2016 ರಂದು ಸಂಜೆ 05.30-06.00 ಸಮಯದಲ್ಲಿ ನಾವು ಹೊಂಗಳ್ಳಿ ಗ್ರಾಮದ ನಮ್ಮ ಜಮೀನಿಗೆ ಹೋಗಲು ಆರೋಪಿತರ ಗದ್ದೆಯ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದೆವು. ಆರೋಪಿತರು ಅಲ್ಲಿ ನಮಗೆ ಹೋಗಬೇಡಿ ಎಂದು ಹೇಳಿ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿತರ ಗದ್ದೆಯ ಕೆಳಗಿನ ಜಮೀನಿನಲ್ಲಿ ನನ್ನ ಅಣ್ಣ ರಘು ಕೆಲಸ ಮಾಡುತ್ತಿದ್ದು ಏಕೆ ನನ್ನ ತಮ್ಮನಿಗೆ ಬೈಯುತ್ತಿದ್ದೀರಿ ಎಂದು ಕೇಳಲು ಬಂದರು. ಆಗ ಚಂದ್ರು ದೊಣ್ಣೆಯಿಂದ ನನ್ನ ಅಣ್ಣನಿಗೆ ಹೊಡೆಯಲು ಹೋಗಿದ್ದು ನಾನು ಅದನ್ನು ತಪ್ಪಿಸಲು ಹೋದಾಗ ನನ್ನ ಬಲಗೈಗೆ ಏಟಾಯಿತು. ಗೌಡಯ್ಯ ಕಲ್ಲು ತೆಗೆದುಕೊಂಡು ನನಗೆ ಎತ್ತಿ ಹಾಕಲು ಬಂದರು. ಅಲ್ಲಿಂದ ನಾವು ಮುಂದೆ ಹೋಗುವಾಗ ಪುಟ್ಟಮ್ಮ ಹಾಗೂ ಮಹಾಲಕ್ಷ್ಮೀ ಕಲ್ಲುಗಳನ್ನು ತೆಗದು ನಮಗೆ ಹೊಡೆದರು. ಅಲ್ಲೇ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಈಶ್ವರ ಮತ್ತು ಸ್ವಾಮಿ ಜಗಳ ಬಿಡಿಸಿ ಕಳುಹಿಸಿದರು.

ಜಗಳ ಬಿಡಿಸಿದ ನಂತರ ಆರೋಪಿತರ ವಿರುದ್ದ ದೂರು ಕೊಡುವ ಸಲುವಾಗಿ ನಮ್ಮ ಗ್ರಾಮಕ್ಕೆ ಬಂದರು. ಗ್ರಾಮದಲ್ಲಿ ಹಿರಿಯರು ದೂರುಕೊಡುವುದು ಬೇಡ ಗ್ರಾಮದಲ್ಲಿಯೇ ಸರಿ ಮಾಡೋಣವೆಂದು ತಿಳಿಸಿದರು. ಮರುದಿನ ಬೆಳಿಗ್ಗೆ 10.00 ಸಮಯದಲಿ ಆರೋಪಿತರೆಲ್ಲಾರು ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಕೆ.ಆರ್.ಎಸ್ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಆದಾದ ಮೇಲೆ ಪೋಲೀಸ್

ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ನೀಡಿದ್ದೇನೆ. ಸಾಕ್ಷಿಯು ದೂರನ್ನು ಮತ್ತು ದೂರಿನ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 12.45 ಸಮಯದಲ್ಲಿ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಮಹಜರ್ ಮಾಡುವ ಕುರಿತು ಬಂದಿದ್ದರು. ಸ್ಥಳದಲ್ಲಿ ಈಶ್ವರ ಮತ್ತು ಸ್ವಾಮಿ ಸಹ ಇದ್ದರು. ಗಲಾಟೆ ನಡೆದ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿದ್ದೇನೆ. ಪೋಲೀಸರು ಗಲಾಟೆ ನಡೆದ ಸ್ಥಳ ಪರಿಶೀಲನೆ ಮಾಡಿ ಸ್ಥಳದಿಂದ ದೊಣ್ಣೆಯನ್ನು ತೆಗೆದುಕೊಂಡು ಹೋದರು. ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರ್ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ಅನ್ನು ನಿಪಿ.2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2-ಎ ಎಂದು ಗುರುತಿಸಲಾಯಿತು. ಘಟನೆ ಸಂಬಂಧ ಪೋಲೀಸರಿಗೆ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ.

ನನ್ನ ಮತ್ತು ನನ್ನಅಣ್ಣನ ವಿರುದ್ಧ ಗಲಾಟೆ ಮಾಡಿ ಹಲ್ಲೆ ಮಾಡಿ, ಅವಾಚ್ಯ ಬೈದು ಪ್ರಾಣ ಬೆದರಿಕೆ ಹಾಕಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನುನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿತರ ಜಮೀನು ನಮ್ಮ ಜಮೀನಿಗೆ ಲಗತ್ತಾಗಿದೆ ಎಂದರೆ ಸರಿ. ಸದರಿ ಜಮೀನು ಆರೋಪಿತರು ಕ್ರಯಕ್ಕೆ ಪಡೆದಿರುವ ಜಮೀನು ಎಂದರೆ ಸರಿ. ಸದರಿ ಸ್ವತ್ತನ್ನು ಆರೋಪಿತರು ಯಾರಿಂದ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಖರೀದಿ ಮಾಡಿದ ಸ್ವತ್ತನ್ನು ಅವರಿಗೂ ಮೊದಲು ನನಗೆ ಕೊಡಬೇಕೆಂದು ನಾನು ಆರೋಪಿತರ ಪೂರ್ವ ಮಾಲೀಕರ ಹತ್ತಿರ ಕೇಳಿದೆನು ಎಂದರೆ ಸುಳ್ಳು.

ಆರೋಪಿತರು ನನ್ನ ಮತ್ತು ನನ್ನ ಕುಟುಂಬದವರ ವಿರುದ್ದ ದಿಃ 26.04.2016 ರಂದು ದೂರನ್ನು ನೀಡಿದ್ದರು ಅದರಂತೆ ನಮ್ಮ ವಿರುದ್ದ ಪ್ರಕರಣ ಸಹ ದಾಖಲಾಗಿತ್ತು ಎಂದರೆ ಸರಿ. ನಾವು ಖರೀದಿ ಮಾಡಬೇಕಾಗಿದ್ದ ಸ್ವತ್ತನ್ನು ಆರೋಪಿತರು ಖರೀದಿ ಮಾಡಿದ ಕಾರಣ ಅವರಿಗೆ

ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದ ಕಾರಣದಿಂದ ನಮ್ಮ ವಿರುದ್ದ ಆರೋಪಿತರು ಕೇಸು ದಾಖಲು ಮಾಡಿದ್ದರು ಎಂದರೆ ಸುಳ್ಳು.

ಊರಿನಲ್ಲಿಯೇ ಪಂಚಾಯಿತಿ ಮಾಡೋಣವೆಂದು ತಿಳಿಸಿದ ಗ್ರಾಮಸ್ಥರ ಹೆಸರು ಹೇಳಬಲ್ಲೆ. ಅವರ ಹೆಸರು ಬಬ್ರುವಾಹನ ಮತ್ತು ನಾಗೇಂದ್ರ. ನಮ್ಮ ವಿರುದ್ಧ ದಾಖಲು ಮಾಡಲಾದ ದೂರಿನಿಂದ ತಪ್ಪಿಸಿಕೊಳ್ಳಲು ಆರೋಪಿತರ ವಿರುದ್ಧ ಯಾವುದೇ ಗಲಾಟೆ ನಡೆಯದಿದ್ದರೂ ಸುಳ್ಳು ದಿನಾಂಕ ನಮೂದಿಸಿ ಕೇಸು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಪೋಲೀಸರು ಯಾವುದೇ ಸ್ಥಳ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾಲು.1 ಅನ್ನು ಪೋಲೀಸರ ವಶಕ್ಕೆ ಕೇಸಿನ ಸಲುವಾಗಿ ನಾವೇ ಹಾಜರುಪಡಿಸಿದ್ದೇವೆ ಎಂದರೆ ಸುಳ್ಳು. ರಸ್ತೆ ಪೂರ್ವ-ಪಶ್ಚಿಮವಾಗಿ ಇರುತ್ತದೆ ಎಂದರೆ ಸುಳ್ಳು. ಸದರಿ ರಸ್ತೆ ಆರೋಪಿತರ ಜಮೀನಿಗೆ ಕೊನೆಯಾಗುತ್ತದೆ ಎಂದರೆ ಸುಳ್ಳು.

ಆರೋಪಿತರು ತಮ್ಮ ಜಮೀನಿನಲ್ಲಿ ಭತ್ತ ಬೆಳೆದಿದ್ದು ಅವರ ಜಮೀನಿನಲ್ಲಿ ನಾವು ಹೋದ ಕಾರಣ ಅವರ ಭತ್ತದ ಬೆಳೆಗೆ ಹಾನಿಯಾಗಿದ್ದು ಅದನ್ನು ಕೇಳಿದ ಕಾರಣಕ್ಕೆ ಅವರ ವಿರುದ್ದ ಸುಳ್ಳು ದೂರುನೀಡಲಾಗಿದೆ ಎಂದರೆ ಸರಿಯಲ್ಲ.

ಈಶ್ವರ ಮತ್ತು ಸ್ವಾಮಿ ನಮ್ಮ ಜಮೀನಿಗೆ ಬಂದು ಕೇಳಿದಾಗ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿತರ ಜಮೀನಿನ ಸುತ್ತ ಮುತ್ತ ಈಶ್ವರ ಮತ್ತು ಸ್ವಾಮಿಗೆ ಸೇರಿದ ಜಮೀನು ಇಲ್ಲವೆಂದರೆ ಸರಿ. ಆರೋಪಿತರ ಜಮೀನಿನ ಸುತ್ತ ಮುತ್ತ ಬೇರೆಯವರಿಗೆ ಸೇರಿದ ಜಮೀನು ಇದ್ದು ಅದರ ಮಾಲೀಕರು ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.